**ದಿನಾಂಕಃ 14-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ ಎಸ್.ಕೆ.ಕೆ ವಕೀಲರಿಂದಃ**

ಕರ್ನಾಟಕ ಸರ್ಕಾರ, ತಾಲ್ಲೂಕು ಕಚೇರಿ ದಾವಣಗೆರೆ ಜಿಲ್ಲೆಯವರು ದೃಢಿಕರಿಸಿರುವ ನನ್ನ ಗುರುತಿನ ಚೀಟಿಯ ನೋಟರಾಜ್ಞ ಪ್ರತಿಯನ್ನು (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ.ಸಿ.ಬಿ.ವಕೀಲರಿಂದಃ**

ಮೃತ ರಾಜು.ಎಸ್.ಆರ್ ರವರಿಗೆ ಅಂಗವಿಕಲ ವೇತನವನ್ನು ನಮ್ಮ ಕಚೇರಿಯಿಂದ ನೀಡಲಾಗುತ್ತಿತ್ತು ಎನ್ನುವ ಕಡತ ನಮ್ಮ ಇಲಾಖೆಯಲ್ಲಿ ಅಲಭ್ಯವಾಗಿರುವ ಕಾರಣಕ್ಕಾಗಿ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್-9 ರಲ್ಲಿ ಸದರಿ ಮೃತ ರಾಜು.ಎಸ್.ಆರ್ ರವರು

ನಮ್ಮ ಇಲಾಖೆಯಿಂದ ಅಂಗವಿಕಲ ವೇತನವನ್ನು ಪಡೆದು ಕೊಳ್ಳುತ್ತಿದ್ದರು ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಮಾಹಿತಿಯನ್ನು ಸದರಿ ಮೃತ ರಾಜು.ಎಸ್.ಆರ್ ರವರಿಗೆ ಸಂಬಂಧಪಟ್ಟ ಕಡತ ಕಚೇರಿಯಲ್ಲಿ ಲಭ್ಯವಾಗಿ ಇಲ್ಲದೇ ಇದ್ದರೂ ಸಹ ಯಾವ ಆಧಾರದ ಮೇರೆಗೆ ಸದರಿ ಮಾಹಿತಿಯನ್ನು ನಿ.ಆರ್-9 ರಲ್ಲಿ ನಮೂದಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ತನಗೆ ನ್ಯಾಯಾಲಯ ಕಾಲಾವಕಾಶ ನೀಡಿದರೆ ಸದರಿ ದಾಖಲೆಯನ್ನು ಹುಡುಕಿಕೊಂಡು ಬಂದು ನ್ಯಾಯಾಲಯಕ್ಕೆ ಹಾಜರು ಮಾಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ .

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೊಸ್ಕರ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.